ಆತ್ಮವಿಶ್ವಾಸದಲ್ಲಿ ನಡೆಸಿದ್ದು ಹೆಣ್ಣನ್ನು ಕುರಿತ ಹಿಂದಿನ, ಇಂದಿನ ಸಿದ್ಧಾಂತಗಳನ್ನು ಮುರಿದು ಕಟ್ಟುವ ಧೀರೆಯಾಗಿ ನಮ್ಮೆದುರು ನಿಲ್ಲಿಸುತ್ತದೆ. ಯಾಕೋ ಕವಿ ಅಜ್ಞೇಯರ ಪ್ರಸಿದ್ಧವಾದ ಮಾತು ನೆನಪಾಗುತ್ತಿದೆ, 'ಕಿತನಿ ನಾವೋಂಮೆ ಕಿತನೀ ಬಾರ್' – 'ಎಷ್ಟೊಂದು ದೋಣಿಗಳಲಿ, ಎಷ್ಟೊಂದು ಬಾರಿ' – ಹೆಣ್ಣಿನ ವಿಷಯಕ್ಕೆ ಅವಳು ಆಯ್ಕೆಯ ಬದುಕಿನ ದೋಣಿಗಳಲ್ಲಿ ಅದೆಷ್ಟು ಬಾರಿ ಪ್ರಯಾಣಿಸಿದರೂ ಲೋಕಕ್ಕೆ ಅದು ಪ್ರಯಾಣವಾಗಿ, ಅವಳ ಹಕ್ಕಾಗಿ, ಅದನ್ನು ಗೌರವಿಸಬೇಕಾದ್ದು ಲೋಕದ ಬಾಧ್ಯತೆಯಾಗಿ ಕಾಣಿಸುವುದೇ ಇಲ್ಲ. ಮತ್ತೆ ಮತ್ತೆ ಅದು ಹೆಣ್ಣು ನಡೆಸಿದ್ದು ದೋಣಿಯೇ ಅಲ್ಲ, ಅದು ಅವಳ ಪ್ರಯಾಣವೇ ಅಲ್ಲ ಎನ್ನುವ ಸುಳ್ಳು ವಿತಂಡವಾದದಲ್ಲೇ ತನ್ನ ಅಧಿಕಾರ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇದೆ.

ಜಯಕುಮಾರ್ ಅವರ ಈ ಕೃತಿಗೆ ತನ್ನ, ಪರರ ಮತ್ತು ಲೋಕದ ನಿರೂಪಣೆಯಾಗುವ ಎಲ್ಲ ಆಯಾಮಗಳೂ ಸಿಕ್ಕಿರುವುದು ಒಂದು ವಿಶೇಷದ ಸಂಗತಿ. ಇದು ಸುಲಭಕ್ಕೆ ಸಿಕ್ಕುವಂಥದ್ದಲ್ಲ. ಯಾರಿಗೆ ತಾನು ಎನ್ನುವ ಆತ್ಮರತಿಯನ್ನು ಮೀರಿಕೊಳ್ಳುತ್ತಾ ಲೋಕದ ಬಗೆಗೆ ತನ್ನಂತೆ ಪರರ ಬಗೆವ ಮಾನವೀಯ ಒಳ ತುಡಿತ ಇರುತ್ತದೋ ಅವರಿಗೆ ಈ ಸಾಧ್ಯತೆ ತೆರೆದುಕೊಳ್ಳುತ್ತಾ ಹೋಗುತ್ತದೆ. ಈ ಮಾತುಗಳನ್ನು ಹೇಳುತ್ತಿರುವಾಗ ಜಯಕುಮಾರ್ ಅವರನ್ನು ಆರಾಧಿತ ನಾಯಕನ ಸ್ಥಾನದಲ್ಲಿ ಇಟ್ಟು ನೋಡಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಆ ಮಾನವೀಯ ತುಡಿತ ಈ ಕೃತಿಯಲ್ಲಿ ನಮ್ಮ ಅನುಭವಕ್ಕೆ ಬರುತ್ತದೆ, ಅದು ಈ ಕೃತಿಗೆ ಇತರರ ಕೃತಿಗಳಲ್ಲಿ ಅಪರೂಪಕ್ಕೆ ಕಾಣಿಸುವ ಸಂಗತಿ ಎನ್ನುವ ಅಂಶದ ಕಡೆಗೆ ನನ್ನ ಗಮನವಿದೆ. ಇದರ ಮೂಲ ಇವರ ತಾಯಿಯಲ್ಲಿತ್ತು. ಇಲ್ಲವಾದರೆ ಪಿ.ಕೆ. ಚಂದ್ರಶೇಖರ್ ಮತ್ತು ಆರ್. ಜಯಕುಮಾರ್ ಎನ್ನುವವರು ಅಪೂರ್ವ ಅಣ್ಣತಮ್ಮಂದಿರಾಗಲು ಸಾಧ್ಯವಾಗುತ್ತಿರಲಿಲ್ಲ.

ಕುಂಞಮ್ಮ ಕೇರಳದ ಎಸ್ಟೇಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಣುಮಗಳು. ಈಕೆಯ ಚೆಲುವು, ದಕ್ಷತೆ ಅಥವಾ ಹೀಗೂ ಹೇಳೋಣ, ಈ ಯಾವ ಕಾರಣಗಳ ಹೆಸರಿಲ್ಲದೆಯೂ ಆ ಎಸ್ಟೇಟ್‌ನ ಮ್ಯಾನೇಜರ್ ಪಾಲ್ಘಾಟ್ ಕೃಷ್ಣ ನಾಯರ್ ಎನ್ನುವವರು ಈಕೆಯನ್ನು ಅಪಾರವಾಗಿ ಇಷ್ಟಪಟ್ಟು, ಮನೆಯವರ ಪ್ರಬಲ ವಿರೋಧದ ನಡುವೆಯೂ ಮದುವೆಯಾಗುತ್ತಾರೆ. ಕೂಲಿ ಕೆಲಸಕ್ಕೆಂದು ಬಂದ ಹೆಣ್ಣುಮಗಳು ಸಿರಿವಂತ ಕುಟುಂಬವೊಂದರ ಸೊಸೆಯಾಗುತ್ತಾಳೆ. ಇಬ್ಬರು ಮಕ್ಕಳು ಹುಟ್ಟಿದ ನಂತರ ಅನಿರೀಕ್ಷಿತವಾಗಿ ಕೃಷ್ಣನಾಯರ್ ತೀರಿಕೊಳ್ಳುತ್ತಾರೆ. ಮುಂದಿನದು ನಾಟಕೀಯವಷ್ಟೇ ಅಲ್ಲ, ಸಿನಿಮೀಯ ಎಂದೂ ಅನ್ನಿಸುವಂತಹ ಕಥೆ. ಮೊದಲೇ ಈಕೆಯ ಬಗೆಗೆ ಕುಟುಂಬದಲ್ಲಿದ್ದ ಅಸಹನೆ ನಾಯರ್ ಅವರ ಸಾವಿನಿಂದ ಸ್ಪಷ್ಟ ಕಾರ್ಯತಂತ್ರವಾಗಿ ರೂಪುಗೊಳ್ಳುತ್ತದೆ. ತಾಯಿ–ಮಕ್ಕಳನ್ನು ಕೊಂದೇ ಬಿಡುವ ಹುನ್ನಾರದ ಸೂಚನೆ ಸಿಕ್ಕ ನಾಯರ್ ಅವರ ಗೆಳೆಯರು, ತಾಯಿ–ಮಕ್ಕಳನ್ನು ಅಲ್ಲಿಂದ ಪಾರು ಮಾಡಲು ಎಲ್ಲ ಸಹಾಯ ಮಾಡುತ್ತಾರೆ. ಕೋಟ್ಯಧಿಪತಿಯ ಕೈಹಿಡಿದು ಭವ್ಯ ಬದುಕು ನಡೆಸಬಹುದಾದ ಈ ತಾಯಿ, ಸೊನ್ನೆಯಿಂದ ಸೊನ್ನೆಗೆ ಎನ್ನುವಂತೆ ಇನ್ನೂ ಬಡತನಕ್ಕೆ ಜಾರುವ ದುರಂತ. ಕೂಲಿಯಾಳಾಗಿ ಯಜಮಾನತಿಯ ಪಟ್ಟಕ್ಕೆ ಏರಿದವರು ಮತ್ತೆ ಕೂಲಿಯ ಬದುಕಿಗೆ. ಈ ಬಾರಿಯದ್ದು ಇನ್ನೂ ಕಷ್ಟ, ಜೊತೆಗೆ ಇಬ್ಬರು ಮಕ್ಕಳು ಬೇರೆ. ಒಂದು ಹಸುಗೂಸನ್ನು, ಎಳೆಯ ಬಾಲಕನನ್ನು ಜೊತೆಯಲ್ಲಿ ಇಟ್ಟುಕೊಂಡು ಆ ಹೆಣ್ಣುಮಗಳು ಇನ್ನೂರಕ್ಕೂ ಹೆಚ್ಚಿನ ಕಿಲೋಮೀಟರ್ ದೂರವನ್ನು ನಡೆದೇ ಸವೆಸುತ್ತಾರೆ. ಗಂಡನ ಮನೆಯವರು ಯಾವ ಗಳಿಗೆಯಲ್ಲಾದರೂ ತನ್ನ ಮೇಲೆ ಆಕ್ರಮಣ ನಡೆಸಬಹುದು ಎನ್ನುವ ಜೀವಭಯದೊಂದಿಗೆ. ಬೋಯಿಕೇರಿ ಎನ್ನುವ ತನ್ನ ಸ್ವಸ್ಥಳಕ್ಕೆ ಬಂದು ತಲುಪಿ ನಿಟ್ಟುಸಿರುಬಿಡುತ್ತಾರೆ. ಅಂಥ ಧಾವಂತದಲ್ಲಿ ಬರುವಾಗಲೂ ತನ್ನ ಪ್ರೀತಿಯ ಗಂಡನ ನೆನಪಿಗೆಂದು ಆತನ ಒಂದು ಪ್ಯಾಂಟು, ಕನ್ನಡಕಗಳನ್ನು ತರಲು ಈಕೆ ಮರೆಯುವುದಿಲ್ಲ. ಅಬ್ಬಾ ಎನ್ನಿಸುವುದರೊಂದಿಗೆ ಗಂಡು ಹೆಣ್ಣಿನ ನಡುವಿನ ಈ ಮಾಯಕದ ಬಗ್ಗೆಯೂ ಕೃತಜ್ಞತೆ ಹುಟ್ಟುತ್ತದೆ, ಇಂಥ ವಿವರಗಳನ್ನು ನೋಡಿದಾಗ.